
ಪುಸ್ತಕ ಪರಿಚಯ

# ನೀಲಕಂಠ ದೀಕ್ಷಿತರ 'ಶಾಂತಿವಿಲಾಸ'

ಹದಿನೇಳನೇ ಶತಮಾನದ ಕೃತಿಯೊಂದು ಆಧುನಿಕ ಕಾಲಕ್ಕೂ ಅತ್ಯಂತ ಸಮರ್ಪಕವಾದ ರೀತಿಯಲ್ಲಿ ಸಾರ್ಥಕ ಜೀವನದ ಮಾರ್ಗದರ್ಶಕ ಸೂತ್ರಗಳನ್ನು ನೀಡುವುದೆಂದರೆ ನಂಬಲಾಗುವುದೆ? ಭರ್ತೃಹರಿಯ ನೀತಿಶತಕ, ವೈರಾಗ್ಯಶತಕಗಳಂತೆ, ಸರ್ವಜ್ಞನ ವಚನಗಳಂತೆ, ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ'ದಂತೆ ಜೀವನಕ್ಕೆ ದಾರಿದೀಪವಾಗಬಲ್ಲ ಹಲವು ಮಾತುಗಳನ್ನು ಹೇಳುವ ಒಂದು ಅಪೂರ್ವ ಕೃತಿಯೇ ನೀಲಕಂಠ ದೀಕ್ಷಿತರ 'ಶಾಂತಿವಿಲಾಸ.' ೧೭ನೇ ಶತಮಾನದ ಸಂಸ್ಕೃತದ ಉದ್ದಾಮ ಪಂಡಿತರಾಗಿದ್ದ ಅಪ್ಪಯ್ಯ ದೀಕ್ಷಿತರ ಮೊಮ್ಮಗನೇ ನೀಲಕಂಠ ದೀಕ್ಷಿತರು. ಸಾಂಪ್ರದಾಯಿಕ ಶೈವಬ್ರಾಹ್ಮಣ ಮನೆತನ ಅವರದು. ಅಜ್ಜ ಅಪ್ಪಯ್ಯ ದೀಕ್ಷಿತರ ಅನುಗ್ರಹ ಇವರ ಮೇಲೆ ವಿಶೇಷವಾಗಿತ್ತು. ಸಂಪತ್ತು, ಕೀರ್ತಿಗೌರವಗಳಿಗಾಗಿ ಅಲ್ಲ ಪಾಂಡಿತ್ಯವಿರುವುದು, ಅದು ಮೋಕ್ಷಸಾಧನೆಗಾಗಿ ಎಂದು ಇವರು ನಂಬಿದ್ದರು. ಮಹಾಕಾವ್ಯ, ನಾಟಕ, ಶತಕ, ಲಘುಕಾವ್ಯಗಳನ್ನು ರಚಿಸಿದ ದೀಕ್ಷಿತರು ಮಧುರೆಯ ತಿರುಮಲ ನಾಯಕನ ಆಸ್ಥಾನಕವಿಯಾಗಿದ್ದರು.




ಕೃತಿ: ನೀಲಕಂಠ ದೀಕ್ಷಿತರ ಶಾಂತಿವಿಲಾಸ
ಲೇಖಕರು : (ಅನು:) ಕೆ.ಎಲ್.ಪ್ರಸನ್ನಾಕ್ಷೀ
ಪ್ರಕಾಶನ : ಶ್ರೀರಾಮಕೃಷ್ಣ ಆಶ್ರಮ, ಮೈಸೂರು
ಪುಟ: 98 ಬೆಲೆ : 45/-

ಈ ಕೃತಿಯನ್ನು ಕನ್ನಡಕ್ಕೆ ತರುವುದರಲ್ಲಿ ವಿಶೇಷವಾದ ಔಚಿತ್ಯವಿದೆ, ಅರ್ಥವಿದೆ, ಹಾಗೂ ಅನೇಕ ಮಂದಿ ಜನಸಾಮಾನ್ಯರಿಗೆ ಇದರಿಂದ ಪ್ರಯೋಜನವೂ ಇದೆ. ಕಾರಣ — ಇಲ್ಲಿ ಹೇಳಿರುವ ವಿಚಾರಗಳು ಯಾವುದೋ ಒಂದು ಕಾಲಕ್ಕೆ ಅನ್ವಯವಾಗುವ ಮಾತುಗಳಲ್ಲ, ಇವು ಎಲ್ಲ ಕಾಲಕ್ಕೂ ಸಲ್ಲುವ, ಎಲ್ಲ ಬಗೆಯ ಜನರಿಗೂ ಬೆಳಕಾಗಬಲ್ಲ ನುಡಿಮುತ್ತುಗಳು. ಅನುವಾದಕರು ಹೇಳುವಂತೆ, ಇದು ಕಾವ್ಯದ ರೂಪದಲ್ಲಿದೆ. ರೂಪವೇನೋ ಕಾವ್ಯದ್ದು, ಆದರೆ ಇದರ ಅಂತರಂಗ ನೀತಿ, ವೈರಾಗ್ಯ, ಧರ್ಮ, ಭಕ್ತಿ, ಭಗವತ್ಕೃಪೆ — ಇವೇ ಮೊದಲಾದ ಸಂಗತಿಗಳಿಂದ ಕೂಡಿದೆ. ಈ ಕೃತಿಯನ್ನು ಕುರಿತು ಅನುವಾದಕಿ 'ಪೀಠಿಕೆ – ಕವಿ ಕಾವ್ಯ ಪರಿಚಯ' ದಲ್ಲಿ ಹೀಗೆ ಬರೆಯುತ್ತಾರೆ:

''ಇದು ಐವತ್ತೊಂದು ಪದ್ಯಗಳಿಂದ ಕೂಡಿದ ಅತ್ಯಂತ ಚಿಕ್ಕ ಕಾವ್ಯ. ಎಲ್ಲಾ ಪದ್ಯಗಳೂ ಮಂದಾಕ್ರಾಂತ ವೃತ್ತದಲ್ಲಿವೆ. ಜೀವನದ ಅನುಭವದ ಮೂಸೆಯಲ್ಲಿ ನೊಂದು ಬೆಂದ ಜೀವಿಯ ಮಂದವಾದ ಗತಿಯನ್ನು ಈ ಛಂದಸ್ಸು ಪ್ರತಿನಿಧಿಸುತ್ತದೆ. ಹೀಗೆ ನೋವಿನಿಂದ ನಜ್ಜುಗುಜ್ಜಾಗುತ್ತಿರುವ ಜೀವಿಗೆ, ಕಾಮಾದಿಗಳನ್ನು ಪೂರೈಸಿಕೊಳ್ಳಲಿಕ್ಕಾಗಿಯೇ ಶರೀರದ ಸಮಸ್ತ ವಿಧ ದುಡಿಮೆಯನ್ನೂ ಮುಡಿಪಾಗಿಟ್ಟು ಪ್ರಪಂಚದಲ್ಲಿ ಬಳಲುತ್ತಿರುವ ಜೀವಿಗೆ, ಶಾಂತಿಯ ದಾರಿಯನ್ನು ತಿಳಿಸುವ ಮಹತ್ತಮವಾದ ತತ್ತ್ವವುಳ್ಳ ಕಾವ್ಯವಿದು. ಕಾಮಗಳನ್ನು ಅನುಭವಿಸಿ, ಅನುಭವಿಸಿ ತೃಪ್ತಿ ಆದಮೇಲೆ ವಿರಮಿಸುತ್ತೇನೆ ಎನ್ನುವಂತಹುದಲ್ಲ ಕಾಮ. ಒಂದು ಆಸೆಯ ನಂತರ ಮತ್ತೊಂದು, ಅದರ ನಂತರ ಮತ್ತೊಂದು ಹೀಗೆ ಆಸೆಗಳಿಗೆ ಕೊನೆ ಇಲ್ಲವೇ ಇಲ್ಲ. ಅಗ್ನಿಗೆ ತುಪ್ಪ ಹಾಕಿದಂತೆ. ಆದುದರಿಂದ ಭೋಗಗಳ ತ್ಯಾಗದಿಂದ ಮಾತ್ರ ಶಾಂತಿ ನೆಮ್ಮದಿ ತೃಪ್ತಿ ದೊರಕುವುದು ಎಂದು ಕವಿ ಅನೇಕ ಉದಾಹರಣೆಗಳ ಮೂಲಕ ಇಲ್ಲಿ ದೃಢಪಡಿಸುತ್ತಾರೆ.''

೫೧ ಪದ್ಯಗಳಿರುವ ಈ ಕೃತಿಯಲ್ಲಿ ಹೇಳಿರುವ ವಿಷಯವಾದರೂ ಏನು? ಒಂದು ಉದಾಹರಣೆ (ಸಾರ) : ''ಮುಪ್ಪು, ರೋಗ, ಇಂದ್ರಿಯಗಳ ವಿಕಲತೆ, ಶತ್ರುಗಳ ಆಕ್ರಮಣ ಈ ಎಲ್ಲಾ ಉಂಟಾದಾಗ ಹಣ ಯಾವ ರೀತಿ ಸಹಾಯಕ್ಕೆ ಬರುತ್ತದೆ? ಕಾಮಭೋಗಕ್ಕೆ ಆಗ ಅವಕಾಶವೆಲ್ಲಿ? ಹಣವಿದ್ದು ಅದರಿಂದ ಪ್ರಯೋಜನವೇನು? ಅದು ಸುಖವನ್ನು ಕೊಡುವುದೆ? ಈ ಎಲ್ಲಾ ಆಗುವುದು ಬೇಡ. ಅಥವಾ ನಮ್ಮ ಆಯುಸ್ಸು ಇಷ್ಟೇ ಎಂಬುದಕ್ಕೆ ಪ್ರಮಾಣವೇನು? ಇದೆಲ್ಲಾ ತಿಳಿದಿದ್ದರೂ ಇವೆಲ್ಲವನ್ನೂ ಕಡೆಗಣಿಸಿ, ಯಾವುದೇ ಭಯ, ಚಿಂತೆ ಇಲ್ಲದೆ ಪಾಪರಾಶಿಯನ್ನೇ ಸಂಗ್ರಹಿಸುತ್ತಿರುವೆವಲ್ಲ?'' (೨೦ ನೇ ಪದ್ಯ). ನಮ್ಮೆಲ್ಲರ ಆತ್ಮಗತ ನುಡಿಗಳಂತಿವೆ ಈ ಪದ್ಯಗಳು. ವೈರಾಗ್ಯ, ದೈವಚಿಂತನೆ, ವಿವೇಕ ಮುಂತಾದುವನ್ನು ಹೊಂದದೆ ಪ್ರಾಪಂಚಿಕತೆಯಲ್ಲಿ ಮುಳುಗಿ ಕಾಲವನ್ನು ವ್ಯರ್ಥವಾಗಿ ಕಳೆಯುತ್ತಿರುವವರಿಗೆ ಈ ಪದ್ಯಗಳು ಚಾಟಿಯೇಟಿನಂತೆ ಚುರುಕು ಮುಟ್ಟಿಸುತ್ತವೆ. ಕಾಲ ಮೀರುವ ಮೊದಲೇ ಈಶ್ವರನ ಸಾಕ್ಷಾತ್ಕಾರ ಹೊಂದಬೇಕು ಎಂದು ಇಲ್ಲಿ ಪ್ರತಿಪಾದಿಸಲಾಗಿದೆ. ಅನೇಕ ಉದಾಹರಣೆ, ಉದ್ಧರಣೆ, ಕಥೆ, ವಿವರಣೆಗಳಿಂದ ತುಂಬಿರುವ ಅನುವಾದ ಇಲ್ಲಿನದು. ಮೂಲ ರಚನೆಯ ಆಶಯವನ್ನು ಪೋಷಿಸುವಂತೆ ಹತ್ತು ಹಲವು ಸಂಗತಿಗಳನ್ನು ನೀಡುತ್ತಾ ಹೋಗುವ ಇಲ್ಲಿನ ರೀತಿ ಹೃದ್ಯವಾಗಿದೆ. ಜೀವನದಲ್ಲಿ ಸಾರ್ಥಕತೆಯನ್ನು ಕಾಣಬಯಸುವವರು ಹೊಂದಿರಬೇಕಾದ ಮನೋಧರ್ಮ ಎಂಥದು ಎಂಬುದನ್ನು ಈ ಕೃತಿ